**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ**

**OS 128/2023**

| | |
|---|---|
| ಸಾಕ್ಷಿಯ ಹೆಸರು | ಸಂತೋಷ್ |
| ತಂದೆಯ ಹೆಸರು | ಬಸವರಾಜಪ್ಪ |
| ವಯಸ್ಸು | 35 ವರ್ಷ |
| ಉದ್ಯೋಗ | ಬ್ಯಾಂಕ್ ಉದ್ಯೋಗಿ |
| ವಾಸಸ್ಥಳ | ಚನ್ನಗಿರಿ |
| ದಿನಾಂಕ | 9.12.2025 |

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ವಿ.ಹೆಚ್.ಆರ್. ವಕೀಲರಿಂದ ,**

1. ನಾನು ಕಳೆದ 10 ವರ್ಷಗಳಿಂದ ಚನ್ನಗಿರಿಯ ಕೆನರಾ ಬ್ಯಾಂಕ್ ನಲ್ಲಿ ಉದ್ಯೋಗಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ನ್ಯಾಯಾಲಯದ ಸಮ್ಮನ್ಸ ಮೇರೆಗೆ ನಾನು ಈ ದಿವಸ ನಮ್ಮ ಬ್ಯಾಂಕಿನ ಖಾತೆದಾರರಾದ ಕೆ. ಬಸವರಾಜಪ್ಪ ತಂದೆ ಕೊಟ್ರಪ್ಪ ರವರು ಬ್ಯಾಂಕ್ ಖಾತೆ ತೆರೆಯಲು ಬ್ಯಾಂಕ್ ಗೆ ಸಲ್ಲಿಸಿದ ಅರ್ಜಿಯ ನಕಲು ನಮೂನೆ - 61 ರ ನಕಲಿನ ದೃಢಿಕೃತ ಪ್ರತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಅನುಕ್ರಮವಾಗಿ ನಿಪಿ - 12 ಹಾಗೂ 13 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ ಹೆಚ್.ಪಿ.ವಿ. ವಕೀಲರಿಂದಃ</u>**

2. ನಾನು ಸದರಿ ಬ್ಯಾಂಕ್ ನ ಸಬ್ ಸ್ಟಾಫ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ನಿಪಿ - 12 ರಲ್ಲಿ ಖಾತೆಯ ಸಂಖ್ಯೆ ನಮೂದು ಇರುತ್ತದೆ. ಬ್ಯಾಂಕ್ ಗೆ ಕಳುಹಿಸಲಾದ ಅರ್ಜಿಯಲ್ಲಿನ ಖಾತೆ ಸಂಖ್ಯೆ ಹಾಗೂ ನಾನು ಹಾಜರು ಪಡಿಸಿರುವ ಖಾತೆ ಸಂಖ್ಯೆ ಬೇರೆ ಬೇರೆಯಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ - 12 ರಲ್ಲಿ ಸಂಪೂರ್ಣ ಖಾತೆ ಸಂಖ್ಯೆಯನ್ನು ನಮೂದಿಸಿಲ್ಲ ಎಂದರೆ ಸರಿ. ನಿಪಿ - 12 ಹಾಗೂ 13 ರ ಮೂಲ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಬ್ಯಾಂಕ್ ನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ - 12 ಹಾಗೂ 13 ಈ ಪ್ರಕರಣದ ಮೃತ ಕೆ.ಬಸವರಾಜಪ್ಪ ರವರಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ನಿಪಿ - 12 ಹಾಗೂ 13 ರಲ್ಲಿನ ಸದರಿ ಬಸವರಾಜಪ್ಪ ರವರ ಸಹಿಗಳು ಒಂದಕ್ಕೊಂದು ತಾಳೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಹಿಗಳು ಬೇರೆ ಬೇರೆಯದಾಗಿದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಾ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ.ಶ್ರೀಕಾಂತ್)**
**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**